ಹೆಚ್.ಕೆ.ಡಿ.ಬಿ.ಗೆ 1995-96ರ ಸಾಲಿನ ಕಾರ್ಯಕ್ರಮಕ್ಕೆ ಸೇರಿಸಿ ಕೊಳ್ಳುವುದಕ್ಕೆ ಕೋರಿದೆ. ಪ್ರಸಕ್ತ ರಸ್ತೆಯಲ್ಲಿ ಆಗಿರುವ ಗುಂಡಿಗಳನ್ನು ತುಂಬಿ ರಸ್ತೆಯನ್ನು ಸುಸ್ಥಿತಿಯಲ್ಲಿಡುವಂತೆ ಸೂಚಿಸಲಾಗಿದೆ.

ವಿಷಯ:- ಆಳಂದ ತಾಲ್ಲೂಕಿನಲ್ಲಿ ಗ್ರಾಮೀಣ ಶೌಚಾಲಯಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ114(322)

ಶ್ರೀ ರೇವು ನಾಯಕ ಬೆಳಮಗಿ (ಕಮಲಾಪುರ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಆಳಂದ ತಾಲ್ಲೂಕಿನಲ್ಲಿ ಸಾಮೂಹಿಕ ಶೌಚಾಲಯಗಳು ಹೊಂದಿರುವ ಗ್ರಾಮಗಳೆಷ್ಟು?

ಆ) ಅವುಗಳಲ್ಲಿ ಎಷ್ಟು ಉಪಯೋಗಕ್ಕೆ ಬರುವಂತಹದಿರುತ್ತದೆ?

ಇ) ಸಾಧಿಯ ಪರಿಹಾರಕ್ಕಾಗಿ ಇನ್ನುಳಿದ ಗ್ರಾಮಗಳು ಸೇರಿ ಹೊಸ ಯೋಜನೆ ಏನಾದರೂ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ
(ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ಯ ಸಚಿವರು)

ಅ) ಒಂದು

ಆ) ಒಂದು

ಇ) ಗ್ರಾಮೀಣ ನೈರ್ಮಲ್ಯ ಯೋಜನೆಯಡಿ ಆಳಂದ ತಾಲ್ಲೂಕಿನ ಇನ್ನೂ ಆರು ಗ್ರಾಮಗಳಲ್ಲಿ ಸಾಮೂಹಿಕ ಶೌಚಾಲಯ ನಿರ್ಮಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಮತ್ತು ಕ್ರಿಯಾ ಯೋಜನೆಗಳು ತಯಾರಿಯಲ್ಲಿದೆ.

ವಿಷಯ:- ಗುಲ್ಬರ್ಗಾ ಜಿಲ್ಲೆಗೆ ವಿದ್ಯುತ್ ಸರಬರಾಜು

ಚುಕ್ಕೆ ಗುರುತಿಲ್ಲದ 115(313)

ಶ್ರೀ ರೇವು ನಾಯಕ ಬೆಳಮಗಿ (ಕಮಲಾಪುರ)

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ವಿದ್ಯುತ್ ಪಂಪ್‌ಸೆಟ್‌ಗಳ ಒಟ್ಟು ಸಂಖ್ಯೆ ಎಷ್ಟು?